**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು**

**ಸಿ.ಸಿ. ನಂ.123/2021**

ಫಿರ್ಯಾದಿ ಃ **ಸಖರಾಯಪಟ್ಟಣ ಪೋಲೀಸ್ ಠಾಣೆ**

-ವಿರುದ್ಧ-

ಆರೋಪಿ ಃ **ಶ್ರೀ ಮಹೇಶ ಬಿನ್ ನಂಜಪ್ಪ,**
ಸುಮಾರು 45 ವರ್ಷ ವಯಸ್ಸು,
ಕೂಲಿ ಕೆಲಸ, ವಾಸಃ ಹೊಸಸಿದ್ದರಹಳ್ಳಿ ಗ್ರಾಮ,
ಕಡೂರು ತಾಲ್ಲೂಕು.

ಆರೋಪಣೆ

ಶ್ರೀಮತಿ ಸವಿತರಾಣಿ ಹೆಚ್.ವಿ., ಬಿ.ಎ.ಎಲ್., ಎಲ್.ಎಲ್.ಬಿ., 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಕಡೂರು, ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರೆಸುವ ದೋಷಾರೋಪಣೆ.

ಚಿಕ್ಕಮಗಳೂರು ಜಿಲೆ ಕಡೂರು ತಾಲೂಕು ಸಖರಾಯಪಟ್ಟಣ ಠಾಣಾ ಸರಹದ್ದಿನ ಹೊಸಸಿದ್ದರಹಳ್ಳಿಯ ಗ್ರಾಮದಲ್ಲಿ ಚಾಸಾ-1 ರವರು ಚಾಸಾ-2 ರಿಂದ 4 ರವರ ಸಹಾಯದೊಂದಿಗೆ ಪಂಚರಾದ ಚಾಸಾ 5 ಮತ್ತು 6 ರವರ ಸಮಕ್ಷಮ ದಿನಾಂಕ: 01.05.2020 ರಂದು 3.00 ಗಂಟೆ ಸಮಯದಲ್ಲಿ ದಾಳಿ ಮಾಡಿದಾಗ, ಹೊಸಸಿದ್ದರಹಳ್ಳಿಯ ಗ್ರಾಮದ ವಾಸಿ ಮಂಜಮ್ಮ ರವರ ಮನೆಯ ಪಕ್ಕದ ಖಾಲಿ ಜಾಗದಲ್ಲಿ ಆರೋಪಿಯಾದ ನೀವು ಸರ್ಕಾರದ ಯಾವುದೇ ಪರವಾನಗಿ ಇಲ್ಲದೆ, ಅಕ್ರಮವಾಗಿ ಕಳ್ಳಬಟ್ಟಿ ತಯಾರು ಮಾಡಲು ಒಂದು ಪ್ಲಾಸ್ಟಿಕ್ ಕೊಡದಲ್ಲಿ ಬೆಲ್ಲದ ಕೊಳೆ ಮತ್ತು ರಾಸಾಯನಿಕಗಳನ್ನು ಹಾಕಿದ್ದು, ಇದರ ಪಕ್ಕದಲ್ಲಿ 750 ಎಂ.ಎಲ್ ಪ್ಲಾಸ್ಟಿಕ್ ಬಾಟಲಿಯಲ್ಲಿ 750 ಗ್ರಾಂ ನಷ್ಟು ಕಳ್ಳ ಬಟ್ಟಿ ಸಾರಾಯಿ ತಯಾರಿಸಿ ಮಾರಾಟ

ಮಾಡಲು ಇಟ್ಟುಕೊಂಡಿದ್ದು. ಆದ್ದರಿಂದ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 13(1)(ಎ),15 ಮತ್ತು 32(1) ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಆದ್ದರಿಂದ, ಆರೋಪಿಯಾದ ನೀವು ಮೇಲ್ಕಂಡ ದಂಡನೀಯ ಅಪರಾಧಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಉತ್ತರಃ-

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉತ್ತರಃ-

ದಿನಾಂಕಃ 19.02.2025

ಸಹಿ/-

**(ಶ್ರೀಮತಿ ಸವಿತರಾಣಿ ಹೆಚ್.ವಿ.)**

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆಎಂಎಫ್‌ಸಿ, ಕಡೂರು.**